ಶುರುವಾಗುತ್ತದೆ.'

ನೀಲಿ ಬಿಕಿನಿ ಧರಿಸಿದ್ದ ಹುಡುಗಿ ಹುಡುಗನ ಕುರ್ಚಿಯ ಹಿಂಭಾಗಕ್ಕೆ ಹೋಗಿ ನಿಂತಳು. ಬಲಗೈಯಲ್ಲಿ ಲೈಟರ್ ಹಿಡಿದು ಹುಡುಗ ನೆಟ್ಟಗೆ ಕುಳಿತಿದ್ದ. ಅವನ ದೃಷ್ಟಿ ಮುದುಕನ ಕೈಯಲ್ಲಿದ್ದ ಕತ್ತಿಯ ಮೇಲೆ ಕೇಂದ್ರಿತವಾಗಿತ್ತು.

'ನೀನು ತಯಾರೇನಪ್ಪ?' ನಾನು ಹುಡುಗನನ್ನು ಕೇಳಿದೆ.

'ನಾನು ರೆಡಿ!'

'ನೀವು?'

'ನಾನೂ ರೆಡಿ!' ಕತ್ತಿಯನ್ನು ಹುಡುಗನ ಕಿರುಬೆರಳಿನ ಸುಮಾರು ಎರಡು ಅಡಿ ಮೇಲೆ ಎತ್ತುತ್ತಾ ಮುದುಕ ಹೇಳಿದ. ಹುಡುಗ ವಿಚಲಿತನಾಗಲಿಲ್ಲ. ಅವನ ಹುಬ್ಬುಗಳು ಗಂಟಿಕ್ಕಿಕೊಂಡವು. ಲೈಟರಿನ ಮೇಲೆ ಅವನ ಬಲಗೈ ಹೆಬ್ಬೆರಳು ತಯಾರಾಯಿತು.

'ಸರಿ ಹಾಗಾದರೆ. ಶುರುವಾಗಲಿ.' ನಾನೆಂದೆ.

**ನಾನು ಗಟ್ಟಿಯಾಗಿ ಕೂಗಿ ಹೇಳುವುದಕ್ಕೂ ಮುದುಕನ ರೂಮಿನ ಮುಂಬಾಗಿಲು ತೆರೆಯುವುದಕ್ಕೂ ಸರಿಯಾಯಿತು. ನಾವೆಲ್ಲಾ ಒಮ್ಮೆಲೆ ತಿರುಗಿದೆವು. ಬಾಗಿಲ ಬಳಿ ಒಬ್ಬಳು ಕುಳ್ಳನೆ, ದಟ್ಟ ಕಪ್ಪು ಕೂದಲಿನ ಸ್ವಲ್ಪ ವಯಸ್ಸಾದ ಹೆಂಗಸು ನಿಂತಿದ್ದಳು. ಸ್ವಲ್ಪ ಹೊತ್ತು ಹಾಗೆಯೇ ನಿಂತಿದ್ದು ಅವಳು ಸುತ್ತಲೂ ದೃಷ್ಟಿ ಹರಿಸಿದಳು.**

'ಸರ್, ನೀವು ಲೆಕ್ಕ ಮಾಡುವಾಗ ದಯವಿಟ್ಟು ನನಗೆ ಕೇಳುವ ಹಾಗೆ ಮಾಡುತ್ತೀರಾ?' ಹುಡುಗ ಕೇಳಿದ.

'ಹಾಗೇ ಆಗಲಿ.' ನಾನೆಂದೆ.

ಹುಡುಗ ತನ್ನ ಹೆಬ್ಬೆರಳಿನಿಂದ ಲೈಟರಿನ ಮುಚ್ಚಳವನ್ನು ಚಕ್ಕನೆ ಎತ್ತಿ, ಅದೇ ಬೆರಳಿನಿಂದ ಫ್ಲಿಂಟ್ ವೀಲನ್ನು ಕೆಳಗೆ ಎಳೆದ. ಫ್ಲಿಂಟಿನಲ್ಲಿ ಕಿಡಿ ಹೊತ್ತಿ ಮಂದ ಹಳದಿ ಬಣ್ಣದ ಜ್ವಾಲೆ ಹತ್ತಿಕೊಂಡಿತು.

'ಒಂದು.' ನಾನೆಂದೆ.

ಹುಡುಗ ಬಾಯಿಂದ ಗಾಳಿಯನ್ನು ಊದಿ ಬೆಂಕಿ ಆರಿಸಲಿಲ್ಲ. ಲೈಟರಿನ ಮುಚ್ಚಳವನ್ನು ಹೆಬ್ಬೆರಳಿನಿಂದಲೆ ಎಳೆದು ಮುಚ್ಚಿ ಬೆಂಕಿಯನ್ನು ನಂದಿಸಿದ. ಐದು ಸೆಕೆಂಡು ಸುಮ್ಮನಿದ್ದು ಅವನು ಮತ್ತೊಮ್ಮೆ ಪುನರಾವರ್ತಿಸಿದ.

'ಎರಡು.'

ಯಾರೂ ಮಾತನಾಡಲಿಲ್ಲ. ಹುಡುಗನ ದೃಷ್ಟಿ ಲೈಟರಿನ ಮೇಲೆಯೇ ಕೇಂದ್ರಿಕೃತವಾಗಿತ್ತು. ಮುದುಕನದೂ ಕೂಡ.

'ಮೂರು.'

'ನಾಲ್ಕು.'

'ಐದು.'

'ಆರು.'